# ಸಹೃದಯರ ಅಭಿನಂದನೆ ನೃತ್ಯ ಪ್ರಸ್ತುತಿಗೆ ಪ್ರೇರಣೆ

## 'ವಸುಂಧರಾ ಬಾಣಿ'ಯ ಪ್ರವರ್ತಕಿ ವಸುಂಧರಾ ದೊರೆಸ್ವಾಮಿ ಸಂದರ್ಶನ

**ಕೋಡಿಬೆಟ್ಟು ರಾಜಲಕ್ಷ್ಮಿ**

ಭರತನಾಟ್ಯ ಕ್ಷೇತ್ರದಲ್ಲಿ 'ವಸುಂಧರಾ ಬಾಣಿ' ಎಂಬ ತಮ್ಮದೇ ಆದ ಹೊಸ ಶೈಲಿಯ ಪ್ರವರ್ತಕರಾದ ವಸುಂಧರಾ ದೊರೆಸ್ವಾಮಿ ಅವರಿಗೆ ಇತ್ತೀಚೆಗಷ್ಟೇ ಎಪ್ಪತ್ತೈದು ವಸಂತಗಳು ತುಂಬಿದವು. ಈಗಲೂ ಇಪ್ಪತ್ತೈದರ ಹರೆಯದ ಲವಲವಿಕೆಯಲ್ಲಿ ಹೊಸ ನೃತ್ಯ ಪ್ರಸ್ತುತಿಗಳನ್ನು ನೀಡುತ್ತಿರುವ ಅವರು ಶಿಷ್ಯಂದಿರ ಪ್ರೀತಿಯ 'ಅಮ್ಮಾ'. ದೇಶವಿದೇಶಗಳಲ್ಲಿ ಅವರ ಶಿಷ್ಯಂದಿರು 'ವಸುಂಧರಾ ಬಾಣಿ' ಶೈಲಿಯಲ್ಲಿ ಭರತನಾಟ್ಯದ ಪಾಠ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯಲ್ಲಿ ಹುಟ್ಟಿ ಬೆಳೆದ ನಾಟ್ಯಗುರು, ಮೈಸೂರಿನ ಸೊಸೆಯಾಗಿ ಸಾಧನೆಯ ಮೆಟ್ಟಿಲೇರುತ್ತ ಹೋದವರು. ಬಾಲ್ಯದಲ್ಲಿ ಪಂದನಲ್ಲೂರು ಶೈಲಿಯಲ್ಲಿ ಭರತನಾಟ್ಯ ಅಭ್ಯಾಸ ಮಾಡಿದ ಅವರು ಜ್ಞಾನದಾಹಿಯಾಗಿದ್ದರಿಂದ ಹಿಂದಿರುಗಿ ನೋಡಿದ್ದೇ ಇಲ್ಲ. ಹೊಸಪರಿಕಲ್ಪನೆಗಳ ರೂಪಿಸುತ್ತ, ದೇಶವಿದೇಶಗಳಲ್ಲಿ ಭಾರತೀಯ ನೃತ್ಯದ ಮಹತ್ವವನ್ನು ಪರಿಚಯಿಸುವ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು. ಭರತನಾಟ್ಯ ಮತ್ತು ಯೋಗದ ನಡುವಿನ ಸಂಬಂಧ ಮತ್ತು ಸಮನ್ವಯತೆಯ ಸಾಧ್ಯತೆಗಳನ್ನು ಅನ್ವೇಷಿಸಿದರು. ಯುದ್ಧಕಲೆಗಳಾದ ಕೇರಳದ ಕಳರಿಪಯಟ್ ಮತ್ತು ಮಣಿಪುರದ ತಾಂಗ್‌ತಾ ಕೌಶಲವನ್ನು ಕಲಿತು, ಅವುಗಳನ್ನು ಭರತನಾಟ್ಯದ ಔಚಿತ್ಯದ ಚೌಕಟ್ಟಿನಲ್ಲಿಯೇ ನಿಂತು ನೃತ್ಯನಾಟಕಗಳಲ್ಲಿ ಅಳವಡಿಸುವ ಪ್ರಯತ್ನ ಮಾಡಿ ಯಶಸ್ವಿಯಾದರು. ಅವರ ಸಾಧನೆಗೆ ಮನ್ನಣೆಯ ರೂಪದಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ನಾಟ್ಯರಾಣಿ ಶಾಂತಲಾ ಪ್ರಶಸ್ತಿ ಸೇರಿದಂತೆ ಅನೇಕ ಪುರಸ್ಕಾರಗಳು ಸಂದಿವೆ. ಅವರೊಡನೆ 'ಮಯೂರ' ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.